## ಸೇತುಬಂಧ ಸಾಫಲ್ಯ ಪರೀಕ್ಷೆ – 8 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೋತ್ತರ ಪತ್ರಿಕೆ

| ವಿದ್ಯಾರ್ಥಿಯ ಹೆಸರು: | ದಾಖಲಾತಿ ಸಂಖ್ಯೆ: |
|---|---|

**ಸಾಮರ್ಥ್ಯ – 1. ಮೌಖಿಕವಾಗಿ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆಯುವುದು.**
(ವಿದ್ಯಾರ್ಥಿಗಳಿಗೆ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಗಳಿಗೆ ಸಂಬಂಧಪಟ್ಟಂತೆ ಸೂಕ್ತ ಪ್ರಶ್ನೆಗಳನ್ನು ಕೇಳಿ ಮೌಖಿಕವಾಗಿ ಉತ್ತರ ಪಡೆಯುವುದು.)

**ಸಾಮರ್ಥ್ಯ – 2. ಕೆಳಗಿನ ಗದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**
ವಿಶ್ವೇಶ್ವರಯ್ಯ ಅವರು ತಮ್ಮ ಕೆಲಸ ಕಾರ್ಯಗಳಲ್ಲಿ ಎಷ್ಟೋ ಜನ ಮೇಧಾವಿಗಳ ಸಹಾಯ ಪಡೆಯುತ್ತಿದ್ದರು. ಅದಕ್ಕೆ ಪ್ರತಿಯಾಗಿ ತಕ್ಕ ಸಂಭಾವನೆ ಕೊಡುತ್ತಿದ್ದರು. ಡಿ.ವಿ.ಜಿ ಅವರಿಂದಲೂ ಅವರು ಅನೇಕ ಕೆಲಸ ಮಾಡಿಸಿಕೊಂಡಿದ್ದುಂಟು. ಮೊದಲ ಸಲ ಅವರಿಗೆ ಸಂಭಾವನೆ ಕೊಡಲು ಹೋದಾಗ ಡಿ.ವಿ.ಜಿ ಒಪ್ಪಲಿಲ್ಲ. ಇದು ನಾಡಿನ ಕೆಲಸ. ಅಲ್ಲದೆ ವಿಶ್ವೇಶ್ವರಯ್ಯ ಎಂಥ ಮಹಾನ್‌ವ್ಯಕ್ತಿ! ಅವರ ಜೊತೆಗೆ ವ್ಯವಹರಿಸಿದ್ದೇ ನಮಗೊಂದು ಹೆಮ್ಮೆಯ ವಿಷಯ, ಹಾಗಿರುವಾಗ ಅದಕ್ಕೆ ಸಂಭಾವನೆ ಬೇರೆಯೇ? ಎಂದಿಗೂ ಕೂಡದು. ಇದು ಅವರ ತರ್ಕ. ಆದರೆ ಈ ತರ್ಕ ವಿಶ್ವೇಶ್ವರಯ್ಯನವರ ಹತ್ತಿರ ನಡೆಯಲಿಲ್ಲ. ಡಿ.ವಿ.ಜಿ ಮೊಂಡನಾದರೆ ವಿಶ್ವೇಶ್ವರಯ್ಯ ಜಗಮೊಂಡ. “ಇದು ನನ್ನ ವೈಯಕ್ತಿಕ ಕೆಲಸ, ಇದಕ್ಕೆ ನನಗೆ ಹಣ ಬರುತ್ತದೆ. ನೀವು ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಇನ್ನು ಮುಂದೆ ನಿಮ್ಮ ಸಹಾಯವೇ ನನಗೆ ಬೇಡ” ಎಂದು ವಿಶ್ವೇಶ್ವರಯ್ಯನವರು ಕೋಪಿಸಿಕೊಂಡರು. ಡಿ.ವಿ.ಜಿ ಅವರು “ಆಯಿತು” ಎಂದು ಸಂಭಾವನೆ ತೆಗೆದುಕೊಳ್ಳಲು ಒಪ್ಪಿದರು. ಮುಂದೆ ವಿಶ್ವೇಶ್ವರಯ್ಯನವರು ಡಿ.ವಿ.ಜಿ ಅವರಿಗೆ ಪ್ರತಿಸಲವೂ ಸಂಭಾವನೆಯ ಚೆಕ್ಕನ್ನು ಕೊಡುತ್ತಾ ಹೋದರು. ಡಿ.ವಿ.ಜಿ ಚೆಕ್ಕನ್ನು ಪಡೆಯುತ್ತಾ ಹೋದರು. ಆದರೆ ಆ ಚೆಕ್ಕುಗಳು ಬ್ಯಾಂಕಿನ ಮೆಟ್ಟಿಲು ಹತ್ತಲಿಲ್ಲ. ಹೀಗೆ ಸರ್ಕಾರದ ಸಹಾಯವನ್ನು ಉದಾಸೀನ ಮಾಡಿದ ವ್ಯಕ್ತಿ ಡಿ.ವಿ.ಜಿ.

**ಪ್ರಶ್ನೆಗಳು**

**(ಎ) ಡಿವಿಜಿ ಅವರು ಏಕೆ ಸಂಭಾವನೆಯನ್ನು ಪಡೆಯಲಿಲ್ಲ?**

**(ಬಿ) ಚೆಕ್ಕು ಪಡೆಯಲು ಡಿವಿಜಿ ಅವರನ್ನು ವಿಶ್ವೇಶ್ವರಯ್ಯ ಹೇಗೆ ಒಪ್ಪಿಸಿದರು?**

**ಸಾಮರ್ಥ್ಯ – 3. ಕೆಳಗಿನ ಪ್ರತಿ ಉಪಪ್ರಶ್ನೆಗೂ ಹೇಳಿಕೆಯಂತೆ ಉತ್ತರ ಬರೆಯಿರಿ.**

**1. ಕೆಳಗಿನ ವಿಶಿಷ್ಟ ಪದಪುಂಜಗಳಿಗೆ ಅರ್ಥ ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಚಿನ್ನದ ಹಬ್ಬ

(ಬಿ) ಸಂರಕ್ಷಣೆ

**2. ಕೆಳಗಿನ ಪದಗಳಿಗೆ ಅರ್ಥ ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ದೈನಿಕ

(ಬಿ) ಸೂರ್ಯನಮಸ್ಕಾರ

**3. ಕೆಳಗಿನ ಪದಗಳ ಸಮಾನಾರ್ಥಕ ಪದವನ್ನು ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಪೀಡಿಸು

| |
|---|
| |
| |

(ಬಿ) ಬಡಗಣ

| |
|---|
| |
| |

**4. ಕೆಳಗಿನ ಪದಗಳಿಗೆ ಭಿನ್ನಾರ್ಥ ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಹೊಳೆ

| |
|---|
| |
| |

(ಬಿ) ಆಡು

| |
|---|
| |
| |

**5. ಕೆಳಗಿನ ಪದಗಳಿಗೆ ಪ್ರತಿಯೊಂದಕ್ಕು ಎರಡು ಸಮಾನಾರ್ಥಕ ಬರೆಯಿರಿ.**

(ಎ) ಭೂಮಿ

| | |
|---|---|
| | |

(ಬಿ) ಮಾರ್ಗ

| | |
|---|---|
| | |

**ಸಾಮರ್ಥ್ಯ – 4. ಈ. ಕೆಳಗಿನವುಗಳಲ್ಲಿ ಅರ್ಥ ವ್ಯತ್ಯಾಸವನ್ನು ತಿಳಿದು, ಸ್ವಂತವಾಕ್ಯಗಳಲ್ಲಿ ಬಳಸಿ ಬರೆಯಿರಿ.**

1. ದನ – ಧನ

| |
|---|
| |
| |

2. ಬಾನು – ಭಾನು

| |
|---|
| |
| |

**ಸಾಮರ್ಥ್ಯ – 5. ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.**

1. ರಾಮ ಲಕ್ಷ್ಮಣ ಸೀತೆ ಕಾಡಿಗೆ ಹೋದರು

| |
|---|
| |

2. ಅಬ್ಬಾ ಮೈಸೂರು ಅರಮನೆ ಎಷ್ಟು ಸುಂದರವಾಗಿದೆ

| |
|---|
| |

**ಸಾಮರ್ಥ್ಯ – 6. ಕೆಳಗಿನವುಗಳಿಗೆ ಉತ್ತರ ಬರೆಯಿರಿ.**

1. ಮೂರು ಸಾಲಿನ ಪದ್ಯಗಳನ್ನು ಏನೆಂದು ಕರೆಯುತ್ತಾರೆ?

| |
|---|
| |

2. ಕುಮಾರವ್ಯಾಸ ಭಾರತ ಮಹಾಕಾವ್ಯವು ಯಾವ ಷಟ್ಪದಿಯಲ್ಲಿ ರಚಿತವಾಗಿದೆ?

| |
|---|
| |

3. ಕೆಳಗಿನ ಪದಗಳಿಗೆ ಪ್ರಸ್ತಾರ ಹಾಕಿರಿ.

(ಎ) ಸುರೇಶ (ಬಿ) ಆತನೊಳ್

| | |
|---|---|
| | |
| | |